# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ನವೆಂಬರ್ 2018**, ಬೆಂಗಳೂರು, ಸಂಪುಟ 4, ಸಂಚಿಕೆ 7, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 November 2018**, Bangaluru, Vol. 4, No.7, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription : Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


**ಧಮ್ಮ ಪದಗಳು**

ಅಕತಂ ದುಕ್ಕಟಂ ಸೆಯ್ಯೋ,
ಪಚ್ಛಾ ತಪ್ಪತಿ ದುಕ್ಕಟಂ;
ಕತಂಚ ಸುಕತಂ ಸೆಯ್ಯೋ,
ಯಂ ಕತ್ವಾ ನಾನುತಪ್ಪತಿ.

ಕೆಟ್ಟ ಕಾರ್ಯವನ್ನು ಮಾಡದಿರುವುದು ಉತ್ತಮ. ಕೆಟ್ಟ ಕಾರ್ಯವು ವ್ಯಕ್ತಿಯನ್ನು ನಂತರ ಪೀಡಿಸುತ್ತದೆ. ಒಳ್ಳೆಯ ಕಾರ್ಯವನ್ನು ಮಾಡುವುದು ಉತ್ತಮ. ಅದನ್ನು ಮಾಡಿದ ಮೇಲೆ ವ್ಯಕ್ತಿಯು ದುಃಖಿಸಬೇಕಾಗಿಲ್ಲ.

**ಧಮ್ಮಪದ – 314,** ನಿರಯವಗ್ಗೋ.

## ವಿಪಶ್ಯನ ಧ್ಯಾನವು ಮರಳಿ ಬಂದು ಹರಡಿದ ಸುವರ್ಣ ಮಹೋತ್ಸವ ವರ್ಷಾಚರಣೆ: ನಮ್ಮ ಪೂಜ್ಯ ಗುರೂಜಿ ಶ್ರೀ ಎಸ್.ಎನ್. ಗೋಯಂಕಾರವರಿಗೆ ಕೃತಜ್ಞತೆಗಳನ್ನು ಅರ್ಪಿಸಲು ಅದ್ಭುತ ಸಂದರ್ಭ.

(ಆಗಸ್ಟ್ 26, 2018ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ.)

ಮುಂಬಯಿಯ ಪಂಚಾಯತಿವಾಡಿ ಧರ್ಮಶಾಲೆಯಲ್ಲಿ ಜುಲೈ 3, 1969ರಲ್ಲಿ ಹತ್ತು ದಿನಗಳ ಪ್ರಪ್ರಥಮ ವಿಪಶ್ಯನ ಧ್ಯಾನ ಶಿಬಿರವು ನಡೆಯಿತು. ವಿಪಶ್ಯನ ಧ್ಯಾನವು ಭಾರತಕ್ಕೆ ಮರಳಿ ವಿಶ್ವದಾದ್ಯಂತ ಹರಡಿದ ಐವತ್ತನೇ ವರ್ಷದ ಸುವರ್ಣ ಮಹೋತ್ಸವವನ್ನು, ಜುಲೈ 3, 2018 ರಿಂದ ಜುಲೈ 2, 2019ರ ವರ್ಷ ಪೂರ್ತಿ ಆಚರಿಸಲು ನಾವು ಗಟ್ಟಿ ನಿರ್ಧಾರ ಮಾಡಿದ್ದೇವೆ. ಇದು ಗೋಯಂಕಾಜಿಯವರ ಎಲ್ಲಾ ವಿದ್ಯಾರ್ಥಿಗಳ ಪ್ರತಿನಿತ್ಯದ ಅಭ್ಯಾಸವನ್ನು ಬಲಗೊಳಿಸುವುದರಲ್ಲಿ ಸಹಕಾರಿಯಾಗುತ್ತದೆ ಎಂದು ಆಶಿಸಲಾಗಿದೆ. ಈ ಉದ್ದೇಶ ಸಾಧನೆಗಾಗಿ ಗ್ಲೋಬಲ್ ವಿಪಶ್ಯನ ಪಗೋಡದಲ್ಲಿ ವರ್ಷ ಪೂರ್ತಿ, ಪ್ರತಿ ದಿನ, ಒಂದು ದಿನದ ಶಿಬಿರ ನಡೆಸಲಾಗುವುದು. ಹಳೆಯ ವಿದ್ಯಾರ್ಥಿಗಳು ಯಾವುದೇ ದಿನವಾದರೂ ಇದರ ಪ್ರಯೋಜನ ಪಡೆಯಬಹುದು. ಇತರೆ ಸ್ಥಳಗಳಲ್ಲೂ ಧ್ಯಾನ ಸಾಧಕರು ಈ ಸುವರ್ಣ ಮಹೋತ್ಸವ ಸಂಭ್ರಮಾಚರಣೆ ಮಾಡುವರು. ಇದು ನಾವು ಪೂಜ್ಯ ಗೋಯಂಕಾಜಿಯವರನ್ನು ಸ್ಮರಿಸುವ ಮತ್ತು ಅವರಿಗೆ ನಿಜವಾದ ಕೃತಜ್ಞತೆ ತೋರಿಸುವ ರೀತಿ.

ವಿಪಶ್ಯನಾಚಾರ್ಯ ಪೂಜ್ಯ ಶ್ರೀ ಸತ್ಯನಾರಾಯಣ ಗೋಯಂಕಾಜಿಯವರ ಸಂಕ್ಷಿಪ್ತ ವ್ಯಕ್ತಿ ಚಿತ್ರಣವನ್ನು ಮತ್ತು ಅವರ ಪೂರ್ವಜರ ವಲಸೆ ಮತ್ತು ವ್ಯಾಪಾರದ ವಿವರಣೆಯನ್ನು, ಅವರ ಆತ್ಮಚರಿತ್ರೆಯನ್ನು ಆಧರಿಸಿ, ಅವರದೇ ಮಾತುಗಳಲ್ಲಿ 'ವಿಪಶ್ಯನ ವಾರ್ತಾಪತ್ರ'ದಲ್ಲಿ ಕೊಡುತ್ತಿದ್ದೇವೆ.

ಕಲ್ಯಾಣದತ್ತ ದುಬೆ ಗುರುಗಳ ಸಹಯೋಗವು ನನಗೆ ಅಗಾಧವಾದ ಸಹಾಯ ಮಾಡಿತು. ನನ್ನ ಬಾಲ್ಯದಲ್ಲಿ ಅವರು ಪರಿಚಯಿಸಿದ ರಹೀಮ್ ಮತ್ತು ತುಲಸಿಯವರ ಆಧ್ಯಾತ್ಮಿಕ ಬರಹಗಳು ನನ್ನ ಮೇಲೆ ಅಳಿಸಲಾಗದ ಗುರುತುಗಳನ್ನು ಬಿಟ್ಟವು. ಧಮ್ಮದಲ್ಲಿ ಒಂದು ಆಸಕ್ತಿಯ ಕಿಡಿ ಹೊತ್ತಿಸಿದವು. ಅದು ನಿಜವಾಗಿಯೂ ಪ್ರಯೋಜನಕಾರಿ ಎಂಬುದು ಸಾಬೀತಾಯಿತು.

**ಕೆಲವು ಸ್ಮರಣೀಯ ಘಟನೆಗಳು.**

ನಾನು ಏಳನೆಯ ತರಗತಿಯಲ್ಲಿದ್ದಾಗ, ಎಲ್ಲಾ ಶಾಲೆಗಳು ಪ್ರಥಮ ಚಿಕಿತ್ಸೆಯನ್ನು ಬೋಧಿಸಬೇಕೆಂದು ಕೇಂದ್ರ ಸರ್ಕಾರವು ಆದೇಶ ಹೊರಡಿಸಿತು. ಸುಪ್ರೀಮ್ ಕೋರ್ಟ್‌ನ ನ್ಯಾಯಮೂರ್ತಿಗಳಾಗಿದ್ದ ಶ್ರೀ ಜಿಜಿಭಾಯ್‌ರವರ ಜನಪ್ರಿಯ ಯೋಜನೆ ಇದಾಗಿತ್ತು. ನಾನು ಪುಸ್ತಕ ಪ್ರೇಮಿಯಾಗಿದ್ದರಿಂದ, ಈ ವಿಷಯದ ಮೇಲೆ ಒಂದು ಪುಸ್ತಕವನ್ನು ಮಾರುಕಟ್ಟೆಯಲ್ಲಿ ಖರೀದಿಸಿದೆ. ಶಾಲೆಯಲ್ಲಿ ವಿತರಿಸಿದ ಪುಸ್ತಕಕ್ಕಿಂತ ಈ ಪುಸ್ತಕವು ವಿವರವಾಗಿತ್ತು. ನಮ್ಮಲ್ಲಿನ ಇಂತಹ ಸಾಹಸ ಪ್ರವೃತ್ತಿಗೆ ನಮ್ಮ ತಂದೆಯವರು ಯಾವಾಗಲೂ ಪ್ರೋತ್ಸಾಹ ನೀಡುತ್ತಿದ್ದರು. ಪರೀಕ್ಷೆಯಲ್ಲಿ ನನ್ನ ಉತ್ತರಗಳು ತರಗತಿಗಳಲ್ಲಿ ಬೋಧಿಸಿದ್ದಕ್ಕಿಂತ ಹೆಚ್ಚು ಪರಿಪೂರ್ಣವಾಗಿದ್ದವು. ಇಡೀ ಮ್ಯಾನ್ಮಾರ್‌ಗೇ ನಾನು ಪ್ರಥಮ ಸ್ಥಾನ ಪಡೆದೆ. ಈ ಪರೀಕ್ಷೆಗಳ ಮೇಲ್ವಿಚಾರಣೆ ವಹಿಸಿದ್ದ ವೈದ್ಯರು ಎಲ್ಲಾ ವಿದ್ಯಾರ್ಥಿಗಳಿಗಿಂತ ಈ ಹುಡುಗ ಬಹಳ ಸೂಕ್ಷ್ಮಮತಿ ಎಂದು ತಮ್ಮ ಟಿಪ್ಪಣಿಯಲ್ಲಿ ಬರೆದಿದ್ದರು. ಅವರ ಶಿಫಾರಸಿನ ಮೇಲೆ ಆಗಿನ ಬ್ರಿಟಿಷ್ ಗೌರ್ನರ್ ಆಗಿದ್ದ ಕ್ರೊಕ್ರೀನ್‌ರವರು ಒಂದು ದೊಡ್ಡ ಸಭೆಯಲ್ಲಿ ನನಗೆ ಬಂಗಾರದ ಪದಕ ನೀಡಿದರು.

ನನ್ನ ಪ್ರಥಮ ಉಪಾಧ್ಯಾಯರು ಬೋಧಿಸಿದ ಮೌಲ್ಯಗಳು, ಸಾಧ್ವಿಯಾದ ಮತ್ತು ಧರ್ಮದಿಂದ ತುಂಬಿದ್ದ ನನ್ನ ಸೋದರತ್ತೆ, ವಿಶೇಷವಾಗಿ, ನಾನು ಕಸು ಉಪಾಧ್ಯಾಯರನ್ನು ಗೇಲಿ ಮಾಡಿದಾಗ ಅವರು ಕೊಟ್ಟ ಕಠಿಣ ಎಚ್ಚರಿಕೆ, ನಾನು ನೀತಿಬದ್ಧವಾಗಿ ಬೆಳೆಯಲು ಮತ್ತು ವಿದ್ಯಾಭ್ಯಾಸದಲ್ಲಿ ಹೆಚ್ಚು ಮಗ್ನನಾಗಲು ಕಾರಣವಾದವು. ಇದರ ಫಲವಾಗಿ, ನನ್ನ ತರಗತಿಯಲ್ಲಿ ನಾನೇ ಮೊದಲಿಗನಾಗಿರುತ್ತಿದ್ದೆ ಮತ್ತು ನನ್ನ ಅಧ್ಯಾಪಕರಿಗೆ ಅಚ್ಚುಮೆಚ್ಚಿನವನಾಗಿರುತ್ತಿದ್ದೆ. ಮಾತೃ ಹೃದಯದ ನನ್ನ ಸೋದರತ್ತೆಯನ್ನು ನಾನು ನೆನೆದಾಗಲೆಲ್ಲಾ ಕೃತಜ್ಞತೆಯಿಂದ ನನ್ನ ತಲೆ ಬಾಗುತ್ತದೆ. ಆ ಪ್ರಾರಂಭದ ವರ್ಷಗಳಲ್ಲಿನ ಅವರ ಬೆಂಬಲ ಮತ್ತು ಮಾರ್ಗದರ್ಶನ ಯಾವಾಗಲೂ ನನ್ನ ಜೊತೆಗಿದೆ. ಎಂದೆಂದಿಗೂ ನಾನು ಗುರುಗಳಿಗೆ ಅಗೌರವ ತೋರಿಸುವುದಿಲ್ಲ ಎಂದು ನಾನು ಅವರಿಗೆ ಕೊಟ್ಟ ಭಾಷೆಯನ್ನು ಉಳಿಸಿಕೊಂಡಿದ್ದೇನೆ.

ಈ ಮುಂದಿನ ಘಟನೆ ಇದಕ್ಕೆ ಒಂದು ಉದಾಹರಣೆ. ಖಲ್ಸಾ ಶಾಲೆಯ ಎಲ್ಲಾ ಅಧ್ಯಾಪಕರೂ ಸಿಖ್ಖರಾಗಿದ್ದರು. ನೇರ ನಡೆ ನುಡಿಯ ಶಿಸ್ತಿನ ಜನರಾಗಿದ್ದ ಇವರು ಬೋಧನೆಯಲ್ಲಿ ದಕ್ಷರಾಗಿದ್ದರು. ಉದ್ದನೆಯ ಆಕರ್ಷಕ ಬಿಳಿಗಡ್ಡದ ಮುಖ್ಯೋಪಾಧ್ಯಾಯರು ಇದರಲ್ಲಿ ಅಗ್ರಗಣ್ಯರಾಗಿದ್ದರು. ಹಿಂದುಗಳ ಹೋಳಿ ಹಬ್ಬ(ಬಣ್ಣಗಳ ಹಬ್ಬ)ದಂದು ಯಾವ ಮಗುವೂ ಬಣ್ಣ ಎರಚಿದ ಬಟ್ಟೆಯಲ್ಲಿ ಶಾಲೆಗೆ ಬರಬಾರದೆಂದು ನಿಯಮವಾಗಿತ್ತು. ಹೋಳಿಯ ದಿನವೂ ಶಾಲೆಯ ಸಮವಸ್ತ್ರವು ಶುಭ್ರವಾಗಿ ಹೊಳೆಯುತ್ತಿರಬೇಕು. ಆದರೂ ಒಂದು ಅಹಿತಕರ ಘಟನೆ ನಡೆಯಿತು. ಒಬ್ಬ ತುಂಟ ಹುಡುಗ ನನ್ನ ಸಮವಸ್ತ್ರದ ಮೇಲೆ ಇಂಕ್ ಹಾಕಿದ. ನನ್ನ ಸಮವಸ್ತ್ರದ ಮೇಲಿನ ಇಂಕನ್ನು ನೋಡಿದ ಉಪಾಧ್ಯಾಯರು ಕೆಂಡಾಮಂಡಲವಾದರು. ಹೋಳಿಯ ಬಣ್ಣಗಳನ್ನು ಎರಚಿದ ಬಟ್ಟೆಯಲ್ಲಿ ಬಂದ ಎಲ್ಲಾ ಮಕ್ಕಳಿಗೂ ಬೆತ್ತದಿಂದ ಹೊಡೆಯಲಾಯಿತು. ನನ್ನದೇನೂ ತಪ್ಪಿಲ್ಲದಿದ್ದರೂ ನನ್ನ ಸರದಿಯೂ ಬಂದಿತು; ನನಗೂ ಬೆತ್ತದೇಟು ಬಿದ್ದವು. ನಾನು ಏನೂ ಮಾಡಲು ಸಾಧ್ಯವಿರಲಿಲ್ಲ. ನಾನು ಮಂಕಾದೆ. ಮಾರನೆಯ ದಿನ ನಾನು ನನ್ನ ಉಪಾಧ್ಯಾಯರ ಬಳಿ ಹೋಗಿ ನಡೆದದ್ದನ್ನು ವಿವರಿಸಿ ನನ್ನದೇನೂ ತಪ್ಪಿಲ್ಲ ಎಂದೆ. ನಿಮ್ಮ ಬಗ್ಗೆ ನನಗೆ ಕೋಪ ಮತ್ತು ನಕಾರಾತ್ಮಕತೆ ಬಂದಿದ್ದಕ್ಕಾಗಿ ನಿಮ್ಮ ಕ್ಷಮೆ ಯಾಚಿಸುತ್ತೇನೆ ಎಂದೂ ಹೇಳಿದೆ. ಈ ಪ್ರಾಮಾಣಿಕ ತಪ್ಪೊಪ್ಪಿಗೆಯು ಅವರಿಗೆ ಸಂತೋಷ ಉಂಟುಮಾಡಿತು ಮತ್ತು ನನ್ನ ಬಗೆಗಿನ ಅವರ ಪ್ರೇಮ ಹೆಚ್ಚಾಯಿತು. ಅಲ್ಲಿಯೇ ಮತ್ತು ಆಗಲೇ ನಾನು ನನ್ನ ಸೋದರತ್ತೆಗೆ ಮತ್ತು ಕಸು ಗುರುಗಳಿಗೆ ವಂದಿಸಿದೆ.

ಆ ಶಾಲೆಯ ಎಲ್ಲಾ ಸರ್ದಾರ್(ಸಿಖ್) ಉಪಾಧ್ಯಾಯರುಗಳ

ಪೈಕಿ, ಹರವಂಶರಾಯ್ ಎಂಬ ಒಬ್ಬ ಪಂಜಾಬಿ ಉಪಾಧ್ಯಾಯರಿದ್ದರು. ಅಲ್ಲಿಯ ಇತರೆ ಉಪಾಧ್ಯಾಯರುಗಳಂತೆ ಇವರೂ ಸಹ ಉಲ್ಲಾಸದ ವ್ಯಕ್ತಿಯಾಗಿದ್ದರು. ನನ್ನ ಮಾರವಾಡಿ ಸಮುದಾಯದಲ್ಲಿ ಹೆಚ್ಚಿನ ಭ್ರಷ್ಟಾಚಾರವಿದೆ ಎಂದು ಯಾವಾಗಲೂ ನನಗೆ ಹೃತ್ಪೂರ್ವಕವಾಗಿ ಬುದ್ಧಿ ಹೇಳುತ್ತಿದ್ದರು. "ನೀನು ಏನಾದರು ಮಾಡಲೇಬೇಕು" ಎಂದು ಹೇಳಿ 'ಚಾಂದ್' (ಚಂದ್ರ) ಎಂಬ ನಿಯತಕಾಲಿಕೆಯ ವಾರ್ಷಿಕ ಸಂಚಿಕೆಯನ್ನು ನನ್ನ ಕೈಗಿಟ್ಟರು. ಆ ನಿಯತಕಾಲಿಕೆಯಲ್ಲಿ ಮಾರವಾಡಿ ಸಮುದಾಯದ ಬಗ್ಗೆ ಬಹಳ ಗೇಲಿ ಮಾಡಲಾಗಿತ್ತು.

ಆ ಕ್ಷಣದಲ್ಲಿಯೇ ನಾನು ನನ್ನ ಸಮುದಾಯದಲ್ಲಿರುವ ನಕಾರಾತ್ಮಕ ಅಂಶಗಳನ್ನು ನಿರ್ಮೂಲ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುವ ಶಪಥ ಮಾಡಿದೆ. ಇದು ಅವರಿಗೆ ಸಂತೋಷ ಉಂಟುಮಾಡಿತು. ಇತರೆ ಉಪಾಧ್ಯಾಯರುಗಳೂ ಸಮಾಜದಲ್ಲಿನ ಭ್ರಷ್ಟಾಚಾರ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಮಾಡಬೇಕಾಗಿರುವ ಪ್ರಯತ್ನಗಳ ಬಗ್ಗೆ ಮಾತಾಡಿದ್ದರು. ಗುರಿ ಸಾಧಿಸುವ ನಿಟ್ಟಿನಲ್ಲಿ ಕೆಲಸ ಮಾಡುವವರ ಮುಂಚೂಣಿಯಲ್ಲಿ ನಾನಿರಬೇಕು ಎಂದು ಭಾವಿಸಿಕೊಂಡೆ.

ಆ ದಿನಗಳಲ್ಲಿ ಆರ್ಯ ಸಮಾಜದೊಡನಿದ್ದ ನನ್ನ ಸಹಯೋಗವು ಗಾಢವಾಯಿತು. ಅಲ್ಲಿದ್ದ ಪೂಜಾರಿ, ಶ್ರೀ ಮಂಗಳದೇವ ಶಾಸ್ತ್ರಿಯವರು ಸಭ್ಯಸ್ಥರಾಗಿದ್ದರು. ಸಮಾಜವನ್ನು ಮೇಲೆತ್ತುವಲ್ಲಿನ ಅವರ ಕೊಡುಗೆಯು ಅಪಾರವಾದುದು. ಅವರಿಂದ ನಾನು ಬಹಳ ಕಲಿತೆ.

**ಮೆಟ್ರಿಕ್ಯುಲೇಷನ್ ವಿದ್ಯಾಭ್ಯಾಸ**

ಕಸು ಗುರುಗಳ ಗಣಿತದಲ್ಲಿನ ದಶಮಾಂಶಗಳ ಬೋಧನೆಯು ಬೆಲೆಕಟ್ಟಲಾಗದ್ದು ಎಂಬುದು ಸಾಬೀತಾಯಿತು. ನಾನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ (ನಮ್ಮ ಈಗಿನ 10ನೇ ತರಗತಿ) ಕುಳಿತುಕೊಳ್ಳಬೇಕಾಗಿದ್ದ ನನ್ನ ಶಾಲೆಯ ಹಿರಿಯ ಉಪಾಧ್ಯಾಯರು ಕರುಣಾಮಯಿ ಮತ್ತು ಭಾವನಾ ಜೀವಿಯಾಗಿದ್ದರು. ತರಗತಿಯಲ್ಲಿ ನಾನು ಪ್ರಥಮ ಸ್ಥಾನದಲ್ಲಿರುತ್ತಿದ್ದುದರಿಂದ ಅವರು ನನಗೆ ಒಂದು ಸಹಾಯ ಮಾಡಿದರು. ಒಮ್ಮೆ ಅವರನ್ನು ಸಂಧಿಸಲು ನಾನು ಹೋದಾಗ, ಅವರು ತಮ್ಮ ಕೈಯನ್ನು ಪ್ರೀತಿಯಿಂದ ನನ್ನ ತಲೆಯ ಮೇಲಿಟ್ಟು ಆಶೀರ್ವದಿಸಿದರು. ಆಗ ನಾನು ನನ್ನ ಸಂದಿಗ್ಧತೆಯನ್ನು ಅವರ ಮುಂದಿಟ್ಟೆ. ಅದೇನೆಂದರೆ, ನನ್ನ ಕುಟುಂಬದವರು ನಾನು ಇನ್ನು ಎರಡು ವರ್ಷ ಮಾತ್ರ ವಿದ್ಯಾಭ್ಯಾಸ ಮುಂದುವರಿಸಬೇಕು, ಅಂದರೆ 9ನೇ ತರಗತಿ ಮುಗಿದ ನಂತರ ನಾನು ಶಾಲೆ ಬಿಡಬೇಕು. ಆದರೆ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸುವ ಬಯಕೆ ನನ್ನಾದಾಗಿತ್ತು. ಅದಕ್ಕೆ ನಾನು ಮೂರು ವರ್ಷ ವಿದ್ಯಾಭ್ಯಾಸ ಮಾಡಬೇಕಿತ್ತು.

ನನ್ನ ಹಿರಿಯ ಸಹೋದರ, ಬಾಬುಲಾಲ್, ಏಳನೇ ತರಗತಿ ಮುಗಿದ ಕೂಡಲೆ ವಿದ್ಯಾಭ್ಯಾಸ ನಿಲ್ಲಿಸಿದ್ದ, ಮತ್ತು ನಾನೂ ಅವನನ್ನೇ ಅನುಸರಿಸಬೇಕಾಗಿತ್ತು. ಒಂದೇ ಒಂದು ಆಯ್ಕೆ ಇತ್ತು. ಏಳನೇ ತರಗತಿಯಿಂದ ನೇರವಾಗಿ ನನಗೆ 9ನೇ ತರಗತಿಗೆ ಪ್ರವೇಶ ನೀಡಿದರೆ, ನಾನು ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಬಹುದಿತ್ತು. 'ನೀವು ನನಗೆ ಎರಡು ಬಡ್ತಿ ನೀಡಿದರೂ ನನ್ನ ಸಾಧನೆಯಲ್ಲಿ ಕೊರತೆಯಾಗದಂತೆ ನೋಡಿಕೊಂಡು, ನಾನು ನನ್ನ ಪ್ರಥಮ ಸ್ಥಾನವನ್ನು ಉಳಿಸಿಕೊಳ್ಳುತ್ತೇನೆ' ಎಂದು ಮುಖ್ಯೋಪಾಧ್ಯಾಯರಿಗೆ ವಾಗ್ದಾನ ನೀಡಿದೆ. ಕರಣ್‌ಸಿಂಗ್ ಎಂಬ ಉಪಾಧ್ಯಾಯರು ಎರಡು ತಿಂಗಳು ನನಗೆ ಖಾಸಗಿಯಾಗಿ ಪಾಠ ಮಾಡುವುದಾಗಿ ಆಶ್ವಾಸನೆ ಕೊಟ್ಟರು. ಈ ಹುಡುಗ ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಾನೆ ಎಂಬ ವಿಶ್ವಾಸವಿದ್ದುದರಿಂದ, ಮಖ್ಯೋಪಾಧ್ಯಾಯರು ಸುಲಭವಾಗಿ ಒಪ್ಪಿದರು. ನನಗೆ ಎರಡು ಬಡ್ತಿ(ಏಳನೇ ತರಗತಿಯಿಂದ 9ನೇ ತರಗತಿಗೆ) ದೊರೆಯಿತು ಮತ್ತು ಚೆನ್ನಾಗಿ ಸಾಧನೆ ಮಾಡಿ ನನ್ನ ಮಾತನ್ನು ಉಳಿಸಿಕೊಂಡೆ.

ಕಸು ಗುರುಗಳ ಪ್ರಾರಂಭಿಕ, ವಿಶೇಷವಾಗಿ ಗಣಿತ ಮತ್ತು ಹಿಂದಿ ಭಾಷೆಯಲ್ಲಿನ, ತರಬೇತಿಯಿಂದ ಈ ಎರಡು ವಿಷಯಗಳಲ್ಲಿ ಚೆನ್ನಾಗಿ ಸಾಧನೆ ಮಾಡಿ, ಹತ್ತನೆಯ ತರಗತಿಯ ಮಂಡಳಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ. ಇಡೀ ಮ್ಯಾನ್ಮಾರ್‌ಗೇ ಪ್ರಥಮ ಸ್ಥಾನ ಪಡೆದೆ. ಈಗ ನಾನು ಸರ್ಕಾರದ ಹೆಚ್ಚಿನ ಸವಲತ್ತುಗಳಿಗೆ ಮತ್ತು ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆದೆ. ಆದರೂ ನಾನು ನನ್ನ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಯಿತು.

ನನ್ನ ತಂದೆಯವರು ರಂಗೂನಿನ ಒಂದು ಕಾಲೇಜಿಗೆ ನನ್ನನ್ನು ಸೇರಿಸಿದರು. ಆದರೆ ಕುಟುಂಬದ ಹಿರಿಯರು ಇದನ್ನು ವಿರೋಧಿಸಿದರು. 'ಈಗಲೇ ಇವನು ನಮ್ಮ ಹಳೆಯ ಸಂಪ್ರದಾಯಗಳನ್ನು ಮತ್ತು ಸಾಮಾಜಿಕ ಪದ್ಧತಿಗಳನ್ನು ವಿರೋಧಿಸುತ್ತಾನೆ, ಹೆಚ್ಚಿನ ವಿದ್ಯಾಭ್ಯಾಸ ಮಾಡಿದರೆ ಏನು ಮಾಡುತ್ತಾನೋ ಯಾರಿಗೆ ಗೊತ್ತು' ಎಂದು ವಾದಿಸಿದರು. ಈ ವಾದಸರಣಿ ನನ್ನ ತಂದೆಯವರಿಗೆ ಮನವರಿಕೆಯಾಯಿತು. ಕೇವಲ ಮೂರೇ ದಿನಗಳಲ್ಲಿ ರಂಗೂನಿನ ಕಾಲೇಜಿನಿಂದ ನನ್ನನ್ನು ಮಾಂಡಲೆಗೆ ಕರೆದುಕೊಂಡು ಹೋದರು. 'ನೀನು ಕೆಲಸಕ್ಕೆ ಹೋಗುವ ಅವಶ್ಯಕತೆಯಿಲ್ಲ, ಕುಟುಂಬದ ವ್ಯಾಪಾರದಲ್ಲೇ ಕೆಲಸ ಮಾಡುತ್ತೀಯ, ಆದ್ದರಿಂದ ಹೆಚ್ಚಿನ ವಿದ್ಯಾಭ್ಯಾಸದ ಅವಶ್ಯಕತೆಯಿಲ್ಲ, ಈ ಶಿಕ್ಷಣವೇ ಸಾಕು' ಎಂದು ಹೇಳಿದರು. "ಈಗ ನೀನು ಅಂಗಡಿಯಲ್ಲಿ ಕುಳಿತು ವ್ಯವಹಾರದ ಜಟಿಲತೆಗಳನ್ನು ಅರ್ಥಮಾಡಿಕೊಳ್ಳಬೇಕು" ಎಂದರು. ಜೋಲು ಮುಖ ಮಾಡಿಕೊಂಡು ಅವರನ್ನು ಹಿಂಬಾಲಿಸಿದೆ. ಅದೇ ನನ್ನ ಔಪಚಾರಿಕ ವಿದ್ಯಾಭ್ಯಾಸದ ಕೊನೆಯಾಯಿತು. ಆದರೆ ಖಾಸಗಿಯಾಗಿ ಪರೀಕ್ಷೆಗಳಿಗೆ ಕುಳಿತುಕೊಂಡು ಮನೆಯಲ್ಲಿ ಹಿಂದಿಯ ಅಭ್ಯಾಸವನ್ನು ಮುಂದುವರಿಸಿದೆ.

**ಹಿಂದಿ ಭಾಷಾ ಪ್ರಚಾರ**

ನಾನು, ಮ್ಯಾನ್ಮಾರ್‌ನಲ್ಲಿ ಬಹುಶಃ ಹಿಂದಿ ಭಾಷೆ ಪ್ರೋತ್ಸಾಹಿಸುವ ಗೀಳು ಹತ್ತಿಸಿಕೊಂಡೆ. ಇತರರೊಡಗೂಡಿ, 'ಅಖಂಡ ಬರ್ಮಾ ಹಿಂದಿ ಸಾಹಿತ್ಯ ಸಂಘ' ಸ್ಥಾಪಿಸಿದೆ ಮತ್ತು ಶ್ರದ್ಧೆಯಿಂದ ಕೆಲಸ ಮಾಡತೊಡಗಿದೆ. ವಾರದ ಅಧ್ಯಯನ ಕೇಂದ್ರವನ್ನು ಸಂಘಟಿಸಲಾಯಿತು. ರಾತ್ರಿ ಶಾಲೆಯಲ್ಲಿ ಹಿಂದಿ ಬೋಧಿಸಲು ನಾನು ಪ್ರಾರಂಭಿಸಿದೆ. ಭಾರತದ ವಾರಣಾಸಿಯಲ್ಲಿದ್ದ ಒಂದು ಸಂಘವನ್ನು, ವಾರ್ಧಾದ 'ರಾಷ್ಟ್ರೀಯ ಭಾಷಾ ಸಂಘ'ವನ್ನು, ಪ್ರಯಾಗದ 'ಹಿಂದಿ ಸಾಹಿತ್ಯ ಸಂಘ'ವನ್ನು ಸಂಪರ್ಕ ಮಾಡಿ, ವಿದ್ಯಾರ್ಥಿಗಳಿಗಾಗಿ ಪುಸ್ತಕಗಳು ಮತ್ತು ಪರೀಕ್ಷಾ ಸಾಮಗ್ರಿಗಳನ್ನು ಒದಗಿಸಲು ಕೋರಿದೆ.

ಮಧ್ಯಮ ಮಟ್ಟದ ತಜ್ಞತೆಯವರೆಗೆ ನಾನು ಅಧ್ಯಯನ ಮಾಡಿದ್ದರೂ, ಉನ್ನತ ಮಟ್ಟದವರೆಗೂ ಕೆಲವು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದೆ. ನಂತರ, ಬರ್ಮಾದಲ್ಲಿ ಸೈನ್ಯಾಡಳಿತ ಬಂದದ್ದರಿಂದ, ಹೊರದೇಶದಿಂದ ಬಂದಿದ್ದ ಎಲ್ಲಾ ಪುಸ್ತಕಗಳನ್ನು ನಿಷೇಧಿಸಲಾಯಿತು.

ನಾವು ಪ್ರಯಾಗದ 'ಹಿಂದಿ ಸಾಹಿತ್ಯ ಸಮ್ಮೇಳನ'ದ ಸದಸ್ಯರಾಗಿದ್ದೆವು. ಹಿಂದಿಯ ಪ್ರಥಮ, ಮಧ್ಯಮ ಮತ್ತು ಉತ್ತಮ ಪರೀಕ್ಷೆಗಳ ಅವರ ಸಿದ್ಧ ಪಾಠಗಳನ್ನು ಓದಿ ವಿದ್ಯಾರ್ಥಿಗಳು ಸಮರ್ಥವಾಗಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ್ತಿದ್ದರು. ಅನೇಕ ವಿದ್ಯಾರ್ಥಿಗಳು ಬಹಳ ಉತ್ಸಾಹದಲ್ಲಿರುತ್ತಿದ್ದರು. ಈಗ, ಎಲ್ಲಾ ಸರ್ಕಾರಿ ಶಾಲೆಗಳು ಹಿಂದಿ ಭಾಷಾ ಬೋಧನೆಯನ್ನು ನಿಲ್ಲಿಸಿದ್ದರಿಂದ, ಹಿಂದಿಯ ಪ್ರಥಮ ಮಟ್ಟದ ಅಧ್ಯಯನದಲ್ಲಿ ತೊಂದರೆಯಾಯಿತು.

ನನ್ನ ಕೆಲವು ಸಹಚರರೊಡಗೂಡಿ ನಾನು ನಾಲ್ಕನೇ ತರಗತಿಗಳವರೆಗೆ ಪಠ್ಯಪುಸ್ತಕಗಳನ್ನು ರಚಿಸಿದೆ, ಮತ್ತು ಅವುಗಳನ್ನು ಮ್ಯಾನ್ಮಾರ್‌ನಲ್ಲೇ ಮುದ್ರಿಸಿದೆವು. ಆ ಮುಖೇನ ಬೋಧನೆಯು ಮುಂದುವರಿಯಿತು.

ವಾರ್ಧಾದ 'ರಾಷ್ಟ್ರೀಯ ಭಾಷಾ ಪ್ರಚಾರ ಸಮಿತಿ'ಯ ಪುಸ್ತಕಗಳು ಬಹಳ ಉತ್ತಮವಾಗಿದ್ದವು. ಆದರೆ ಅವರ ಅನುಮತಿಯಿಲ್ಲದೆ ಯಾವ ಪುಸ್ತಕಕ್ಕೂ ಔಪಚಾರಿಕ ಅಂಗೀಕಾರ ಪಡೆಯಲು ಸಾಧ್ಯವಿರಲಿಲ್ಲ. ಆ ಸಮಿತಿಯ ಬಹುಮುಖ್ಯ ಸದಸ್ಯರಾಗಿದ್ದ ಭದಂತ್ ಆನಂದ್ ಕೌಶಲ್ಯಾನಂದಜಿಯವರು ನನಗೆ ಚಿರಪರಿಚಿತರಾದರು. ಅವರು ಯಾವಾಗ ಮ್ಯಾನ್ಮಾರ್‌ಗೆ ಬಂದರೂ 'ಗೋಯಂಕ ಹೌಸ್' ನಲ್ಲಿ ಉಳಿದುಕೊಳ್ಳುತ್ತಿದ್ದರು. ಅವರ ಸಹಾಯದಿಂದ ನಮ್ಮ ಪುಸ್ತಕಗಳಿಗೆ ಕಡಿಮೆ ಕಷ್ಟದಲ್ಲಿ ಅಂಗೀಕಾರ ದೊರೆಯಿತು. ತದನಂತರ ಹೆಚ್ಚಿನ ಪುಸ್ತಕಗಳನ್ನು ಭಾರತದಿಂದ ಸುಲಭವಾಗಿ ತರಲು ಸಾಧ್ಯವಾಯಿತು ಮತ್ತು ನಮ್ಮ ಕೆಲಸವು ಸುಗಮವಾಗಿ ಪ್ರಗತಿ ಹೊಂದಿತು.

ಭಾರತದಲ್ಲಿದ್ದ ಬ್ರಿಟಿಷ್ ಆಡಳಿತವು ಯಾವುದೇ ಕ್ರಾಂತಿಕಾರಕ ಸಾಹಿತ್ಯದ ಮುದ್ರಣವನ್ನು ನಿಷೇಧಿಸಿತ್ತು. ಆದರೆ ಭದಂತ್ ಆನಂದ್ ಅವರ ಮುಖಾಂತರ ಈ ರೀತಿಯ ಪುಸ್ತಕಗಳನ್ನು ತರಿಸಿಕೊಳ್ಳುತ್ತಿದ್ದೆ. ಹಿಂದಿ ಭಾಷಾ ಪ್ರಚಾರದ ಕೆಲಸದ ಜೊತೆಗೆ, ಭಾರತವನ್ನು ಮುಕ್ತಗೊಳಿಸುವ ಕ್ರಾಂತಿಯಲ್ಲಿ ಸೇವೆ ಸಲ್ಲಿಸಲು ನಾನು ಉತ್ಸುಕನಾಗಿದ್ದೆ. ಶ್ರೀ ಮನ್ಮಥನಾಥ ಗುಪ್ತ ಅವರ ಪುಸ್ತಕದಲ್ಲಿ ಕಣ್ಣಿಗೆ ಕಟ್ಟುವಂತೆ ವಿವರಿಸಿದ ಭಾರತದ ಕ್ರಾಂತಿಯ ಚಿತ್ರಣವು ನನ್ನನ್ನು ಅಲ್ಲಾಡಿಸಿತು. ನಾನು ಬರೆದ ಪದ್ಯಗಳಲ್ಲಿ ನನ್ನ ಉತ್ಸಾಹ, ಉದ್ವೇಗ ಪ್ರತಿಫಲಿಸಿದ್ದವು. ನನ್ನ ಹಿಂದಿ ಭಾಷಾ ಪ್ರಚಾರದ ಕೆಲಸ ಒಂದೇ ಸಮನಾಗಿ ಮುಂದುವರಿಯಿತು.

**ಕಾವ್ಯ ರಚನೆ**

ಈಗಾಗಲೇ ಹೇಳಿದಂತೆ, ಕಾವ್ಯ ರಚಿಸುವುದೆಂದರೆ ಚಿಕ್ಕಂದಿನಿಂದಲೂ ನನಗೆ ಇಷ್ಟ. ಮ್ಯಾನ್ಮಾರ್‌ನಲ್ಲಿ ವಾಸಿಸುತ್ತಾ, ಅನೇಕ ವಿಷಯಗಳ ಮೇಲೆ ನಾನು ಕಾವ್ಯ ರಚಿಸಿದೆ. ಸಾರ್ವಜನಿಕ ಕಾವ್ಯ ವಾಚನ ಸಭೆಗಳಲ್ಲಿ ಅವುಗಳನ್ನು

ಓದಿದೆ. ನನ್ನ ಪದ್ಯಗಳು ಸಾಹಿತ್ಯದ ಮೇಲಿನ ನನ್ನ ಪ್ರೀತಿ, ದೇಶಭಕ್ತಿಯನ್ನು, ನಾಯಕರುಗಳ ಪ್ರಶಂಸೆ, ನನ್ನ ಮಾತೃಭೂಮಿ ಮ್ಯಾನ್ಮಾರ್, ನನ್ನ ಪೂರ್ವಜರ ಭೂಮಿ ರಾಜಾಸ್ಥಾನ, ಅದರ ಧೀರ ಯೋಧರು, ಅದರ ಹಬ್ಬಗಳು ಮತ್ತು ಅದರ ಸಾಮಾಜಿಕ ಕೊಡುಗೆ ಮುಂತಾದವುಗಳನ್ನು ಪ್ರತಿಫಲಿಸುತ್ತವೆ. ಕೆಲವು ಪದ್ಯಗಳು ಮ್ಯಾನ್ಮಾರ್‌ನಲ್ಲಿ ಪ್ರಕಟಗೊಂಡವು. ನಂತರ 'ನನ್ನ ಪದ್ಯಗಳು' ಎಂಬ ಪುಸ್ತಕ ಪ್ರಕಟವಾಯಿತು.

**ಹಿಂದಿಯ ಬರಹಗಳು**

ಭಾಷಾ ನೈಪುಣ್ಯತೆ ಇದ್ದುದರಿಂದ, 15 ವರ್ಷದವನಿದ್ದಾಗಲೇ ನಾನು ಒಂದು ಲೇಖನ ಬರೆದೆ. ಅದು ರಂಗೂನಿನ ಒಂದು ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ನಾನು ರೋಮಾಂಚಿತನಾದೆ. ಬಹಳ ಜನ ಅದನ್ನು ನೋಡಲಿ ಎಂದು ಪತ್ರಿಕೆಯನ್ನು ನನ್ನ ಸ್ಕೂಲ್ ಡೆಸ್ಕ್‌ನ ಮೇಲೆಯೇ ತೆರೆದಿಟ್ಟಿದ್ದೆ. ಆಗ ನಾನು 9ನೇ ತರಗತಿಯಲ್ಲಿದ್ದೆ.

ಒಳಗೆ ಬಂದ ಉಪಾಧ್ಯಾಯರು ಡೆಸ್ಕ್ ಮೇಲೆ ತೆರೆದಿಟ್ಟಿದ್ದ ವಾರಪತ್ರಿಕೆಯನ್ನು ನೋಡಿ **"ತರಗತಿಗೇಕೆ ವಾರಪತ್ರಿಕೆ ತಂದಿದ್ದೀಯ?"** ಎಂದು ಗದರಿಸಿದರು. ನನ್ನ ಲೇಖನದ ಮೇಲೆ ಅವರ ಗಮನ ಸೆಳೆದಾಗ, ನಾನು ಅಂತಹ ಸ್ಪಷ್ಟ ಮತ್ತು ಪರಿಶುದ್ಧ ಭಾಷೆಯಲ್ಲಿ ಬರೆದಿರುವುದನ್ನು ಅವರು ನಂಬಲು ಸಾಧ್ಯವಾಗಲಿಲ್ಲ. ನನಗೊಂದು ವಿಷಯ ಕೊಟ್ಟು ಅದರ ಮೇಲೆ ಅಲ್ಲಿಯೇ ಎರಡು ಪುಟ ಬರೆಯಲು ಹೇಳಿದರು. ನಾನು ಉತ್ಸಾಹದಿಂದ ಬರೆದೆ. ನನ್ನ ಪ್ರಯತ್ನ ಅವರನ್ನು ಪ್ರಭಾವಿಸಿತು.

ನನ್ನ ತರಗತಿಯಲ್ಲಿ ನಾನೊಬ್ಬನೇ ಹಿಂದಿ ವಿದ್ಯಾರ್ಥಿಯಾಗಿದ್ದೆ. ಆರ್ಯ ಸಮಾಜಕ್ಕೆ ಸೇರಿದ ಪ್ಯಾರೆಲಾಲ್‌ರವರು ಹಿಂದಿ ಉಪಾಧ್ಯಾಯರಾಗಿ ಹೊಸದಾಗಿ ನೇಮಕಗೊಂಡರು. ಹಿಂದಿ ಭಾಷೆಯಲ್ಲಿ ನೈಪುಣ್ಯತೆಯಿದ್ದರೂ, ಅವರು ಸೂರ್ ಅಥವಾ ತುಲಸಿಯವರನ್ನು ಓದಿರಲಿಲ್ಲ. ಆದ್ದರಿಂದ ಅವರಿಗೆ **ಅವಧಿ** ಮತ್ತು **ಬ್ರಜ್** ನುಡಿಗಟ್ಟುಗಳ ಬಗ್ಗೆ ಚೆನ್ನಾಗಿ ತಿಳಿದಿರಲಿಲ್ಲ. ನಮಗೆ ನಿಗದಿ ಮಾಡಿದ 'ಮಾಧುರಿ ಪಾಡ್ಯ ಪಾರಿಜಾತ' ಪುಸ್ತಕದಲ್ಲಿ ಅನೇಕ ಭಾಗಗಳು ಅವರಿಗೆ ಕಷ್ಟವಾಗುತ್ತಿದ್ದವು. ಅವರು ಆಗಿಂದಾಗ್ಗೆ ನನ್ನ ಹಿಂದಿ ನಿಘಂಟಿನ ಸಹಾಯ ಪಡೆಯುತ್ತಿದ್ದರು.

**ಭಗವಾನ್ ಶ್ರೀಕೃಷ್ಣನಲ್ಲಿ ಗಾಢ ಶ್ರದ್ಧೆ.**

ಮಾಂಡಲೆಯಲ್ಲಿ ನಮ್ಮ ಕುಟುಂಬವು ಸಗಟು(ಹೋಲ್‌ಸೇಲ್) ಬಟ್ಟೆ ಅಂಗಡಿ ನಡೆಸುತ್ತಿತ್ತು. ಬಹುತೇಕ ಜಪಾನ್ ಮತ್ತು ಬ್ರಿಟಿಷ್ ಬಟ್ಟೆಗಳನ್ನು ಅಲ್ಲಿ ಮಾರಲಾಗುತ್ತಿತ್ತು. ಆದರೆ ಭಾರತದಲ್ಲಿ ಸ್ವದೇಶಿ ಚಳುವಳಿಯ ನಂತರ (ಸ್ಥಳೀಯ ಅರ್ಥವ್ಯವಸ್ಥೆಗೆ ಸಹಾಯ ಮಾಡುವ ದೃಷ್ಟಿಯಿಂದ, ವಿದೇಶಿ ವಸ್ತುಗಳನ್ನು ತಿರಸ್ಕರಿಸಿ ಸ್ವದೇಶಿ ವಸ್ತುಗಳನ್ನು ಉಪಯೋಗಿಸಲು ಮಹಾತ್ಮ ಗಾಂಧೀಜಿಯವರು ಭಾರತೀಯರಿಗೆ ಕರೆಕೊಟ್ಟು ಸ್ವದೇಶಿ ಚಳುವಳಿ ಆರಂಭಿಸಿದರು.) ಭಾರತದ ಬಾಂಬೆ ಮತ್ತು ಅಹಮದಾಬಾದ್‌ನಿಂದ ಬರ್ಮಾಕ್ಕೆ ಆಮದಾಗುತ್ತಿದ್ದ ಬಟ್ಟೆಗಳನ್ನೂ ನಮ್ಮ ಅಂಗಡಿಯಲ್ಲಿ ಮಾರಾಟ ಮಾಡಲಾಗುತ್ತಿತ್ತು.

ಬಟ್ಟೆಯ ಎಲ್ಲಾ ಸುರುಳಿಗಳ ಮೇಲೆ ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರ ಅಥವಾ ದೇವರು ಅಥವಾ ದೇವತೆಗಳ ಚಿತ್ರವಿರುವ ಚೀಟಿ ಅಂಟಿಸುತ್ತಿದ್ದರು. ಒಂದು ದಿನ ನಾನು ಒಂದು ಬಟ್ಟೆ ಸುರುಳಿಯ ಮೇಲೆ ನಾನು ಅಪಾರ ಭಕ್ತಿ ಹೊಂದಿದ್ದ ಭಗವಾನ್ ಶ್ರೀ ಕೃಷ್ಣನ ಮನಮೋಹಕವಾದ ಚಿತ್ರ ನೋಡಿದೆ. ಚಿತ್ರವಿದ್ದ ಆ ಚೀಟಿಯನ್ನು ಬಿಡಿಸಿ, ಅದರಷ್ಟೇ ಅಳತೆಯ ರಟ್ಟನ್ನು ಕತ್ತರಿಸಿ, ಪ್ರೀತಿಯಿಂದ ಆ ಚಿತ್ರವನ್ನು ಆ ರಟ್ಟಿಗೆ ಅಂಟಿಸಿದೆ. ಅದನ್ನು ಇನ್ನೂ ಸುರಕ್ಷಿತಗೊಳಿಸಲು, ಅದರ ಮೇಲೆ ಒಂದು ಪ್ಲಾಸ್ಟಿಕ್ ಹಾಳೆಯನ್ನು ಅಂಟಿಸಿದೆ. ನನ್ನ ಅಂಗಿಯ ಜೇಬು ಹಿಡಿಯ ಬಹುದಾದಷ್ಟು ಚಿಕ್ಕದಾಗಿತ್ತು ಆ ಚಿತ್ರ.

ಚಿಕ್ಕ ಹುಡುಗನಾಗಿದ್ದಾಗಿನಿಂದ, ಮುಂದಿನ 20 ವರ್ಷಗಳವರೆಗೆ, ನಾನು ಬರ್ಮಾದಲ್ಲಿರಲಿ, ಭಾರತದಲ್ಲಿರಲಿ ಅಥವಾ ಹೊರದೇಶಗಳಿಗೆ ಪ್ರಯಾಣಿಸುತ್ತಿರಲಿ ಆ ಚಿತ್ರವನ್ನು ನನ್ನ ಅಂಗಿಯ ಜೇಬಿನಲ್ಲಿ, ಹೃದಯದ ಪಕ್ಕದಲ್ಲಿಟ್ಟುಕೊಂಡಿರುತ್ತಿದ್ದ ನೆನಪು ಇನ್ನೂ ಮಾಸಿಲ್ಲ. ನನಗೆ ಸಿಕ್ಕ ಎಲ್ಲಾ ಯಶಸ್ಸು, ನಾನು ಬಹಳ ಭಕ್ತಿಯಿಂದ ಪೂಜಿಸುತ್ತಿದ್ದ ಈ ಸರ್ವೋಚ್ಚ ದೇವರ ಕೃಪೆಯಿಂದ ಎಂದು ನಾನು ಬಲವಾಗಿ ನಂಬಿದ್ದೆ.

ನನ್ನ ಹೈಸ್ಕೂಲ್ ಅಂತಿಮ ವರ್ಷದ ಪರೀಕ್ಷೆಯಲ್ಲಿ ಇಡೀ ಮ್ಯಾನ್ಮಾರ್‌ಗೇ ಪ್ರಥಮ ಸ್ಥಾನದಲ್ಲಿ ಪಾಸಾದದ್ದು, ನನಗೆ ಸರ್ಕಾರದ ವಿದ್ಯಾರ್ಥಿವೇತನ ದೊರೆತದ್ದು ನನ್ನ ಈ ಕರುಣಾಮಯಿ ದೇವರ ಕೃಪಕಟಾಕ್ಷದಿಂದ ಎಂದು ಬಲವಾಗಿ ನಂಬಿದ್ದೆ.

ಜಪಾನ್ ದೇಶದೊಡನೆ ಯುದ್ಧ ಪ್ರಾರಂಭವಾದಾಗ ನನಗೆ ಕೇವಲ 18 ವರ್ಷ ವಯಸ್ಸು. ಅಪಾಯಕಾರಿ ಬೆಟ್ಟಗುಡ್ಡಗಳ ದಾರಿಯಲ್ಲಿ, ಕಾಲುನಡಿಗೆಯಲ್ಲಿ ನನ್ನ ಕುಟುಂಬದವರನ್ನು ಆಗ ನಾನು ಭಾರತಕ್ಕೆ ಕರೆತಂದೆ. ಭಾರತ ಸೇರಿದ ಮೇಲೆ ರೈಲಿನಲ್ಲಿ ನಮ್ಮ ಪೂರ್ವಜರ ದೊಡ್ಡ ಮನೆಯಿದ್ದ ರಾಜಾಸ್ಥಾನದ ಚುರು ತಲುಪಿದೆವು. ಮನೆಯನ್ನು ತಲುಪಿದ ಕೂಡಲೆ, ನನ್ನನ್ನು ಮತ್ತು ನನ್ನ ಅತ್ತಿಗೆ, ಅಣ್ಣ ಬಾಬುಲಾಲರ ಪತ್ನಿಯನ್ನು ಹೊರತುಪಡಿಸಿ, ಪ್ರಯಾಣದ ಬಳಲಿಕೆಯಿಂದ ಪ್ರತಿಯೊಬ್ಬರೂ ಕಾಯಿಲೆ ಬಿದ್ದರು. ಮುಂದಿನ ಕೆಲವು ದಿನಗಳು ಅವರ ಆರೈಕೆಯಲ್ಲಿಯೇ ಕಳೆದು ಹೋದವು. ನಾನು ಕ್ಷೇಮವಾಗಿ ನನ್ನ ಕಾಲಮೇಲೆ ನಿಲ್ಲಲು, ಇಲ್ಲಿಯೂ ನನ್ನ ಕರುಣಾಮಯಿ ಕೃಷ್ಣನ ಕೃಪೆಯೇ ಕೆಲಸ ಮಾಡಿತು ಎಂದು ಭಾವಿಸಿದೆ. ದಕ್ಷಿಣ ಭಾರತದಲ್ಲಿ ನಾನು ನನ್ನ ವ್ಯಾಪಾರದಲ್ಲಿ ಅಗಾಧವಾದ ಯಶಸ್ಸುಗಳಿಸಿದಾಗಲೂ ಅವನ ಅನುಗ್ರಹವನ್ನು ಅನುಭವಿಸಿದ್ದೇನೆ.

ಜಪಾನ್ ಯುದ್ಧ ಮುಗಿದು ನಾನು ಬರ್ಮಾಕ್ಕೆ ಮರಳಿ ಬಂದ ಮೇಲೆ ಸಾಮಾಜಿಕ, ರಾಜಕೀಯ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ದೊರೆತ ಯಶಸ್ಸೂ ಭಗವಾನ್ ಶ್ರೀ ಕೃಷ್ಣನ ಅನುಗ್ರಹದಿಂದ ಎಂದು ಭಾವಿಸಿದೆ.

ಸಾಮಾಜಿಕ ಕ್ಷೇತ್ರದಲ್ಲಿ ಅನೇಕ ಸಂಘ ಸಂಸ್ಥೆಗಳ ಉನ್ನತ ಹುದ್ದೆಗಳಲ್ಲಿ ನಾನಿದ್ದೆ. ಕೆಲವು ಸ್ನೇಹಿತರೊಡಗೂಡಿ 'ಅಖಂಡ ಬರ್ಮಾ ಕಾಂಗ್ರೆಸ್' ಸ್ಥಾಪಿಸಲಾಯಿತು ಮತ್ತು ಬರ್ಮಾದ ತುಂಬೆಲ್ಲಾ ಸುಮಾರು 50 ಶಾಖೆಗಳನ್ನು ತೆರೆಯಲಾಯಿತು. ಜೊತೆಗೆ 'ಅಖಂಡ ಬರ್ಮಾ ಹಿಂದಿ ಸಾಹಿತ್ಯ ಸಂಘ' ಸ್ಥಾಪಿಸಲಾಯಿತು. ಬರ್ಮಾದ ವಿವಿಧ ಭಾಗಗಳಲ್ಲಿ 10 ಶಾಖೆಗಳನ್ನು ಹೊಂದಿ ಅದು ವೇಗವಾಗಿ ಬೆಳೆಯಿತು. ವಾರದ ಸಾಹಿತ್ಯ ಸಭೆಗಳನ್ನು ಸಂಘಟಿಸುತ್ತಾ ಮ್ಯಾನ್ಮಾರ್‌ನಲ್ಲಿ(ಆಗಿನ ಬರ್ಮಾ) ನನ್ನ ಹಿಂದಿ ಪ್ರಚಾರದ ಕೆಲಸವನ್ನೂ ಮುಂದುವರಿಸಿದ್ದೆ. 'ರಾಷ್ಟ್ರೀಯ ವಿದ್ಯಾಪೀಠ' ಎಂಬ ಹೆಸರಿನ ರಾಷ್ಟ್ರೀಯ ಅಕಾಡೆಮಿ ಸ್ಥಾಪಿಸಿ ಉನ್ನತ ಮಟ್ಟದ ಹಿಂದಿ ಭಾಷಾ ಶಿಕ್ಷಣ ಕೆಲಸದಲ್ಲಿ ಸಹಾಯ ಮಾಡಿದೆ. 'ಮಹಾತ್ಮಗಾಂಧಿ ಸ್ಮಾರಕ ಟ್ರಸ್ಟ್'ನ್ನು ಸ್ಥಾಪಿಸಿ ಅದರಡಿಯಲ್ಲಿ ಗಾಂಧೀಜಿಯವರ ಆತ್ಮಚರಿತ್ರೆ ಮತ್ತು ಇತರೆ ಪುಸ್ತಕಗಳನ್ನು ಬರ್ಮೀಯ ಭಾಷೆಗೆ ಅನುವಾದ ಮಾಡಲಾಯಿತು. 'ಬ್ರಹ್ಮಭಾರತಿ ಕಲೆ ಮತ್ತು ಸಂಸ್ಕೃತಿ ಕೇಂದ್ರವನ್ನೂ ಸ್ಥಾಪಿಸಲಾಯಿತು. ನಾಟಕ ನಿರ್ದೇಶನ ಕೆಲಸವನ್ನೂ ಕೈಗೆತ್ತಿಕೊಂಡು ಯಶಸ್ವಿಯಾದೆ.

(ಗೋಯಂಕಾಜಿಯವರ ಆತ್ಮಚರಿತ್ರೆಯಿಂದ)

ಮುಂದುವರಿಯುವುದು..........

**ಮಾತಾಜಿ ಮತ್ತು ಗೋಯಂಕಾಜಿಯವರ ಮಧ್ಯದ ಪತ್ರ ಸಂದೇಶಗಳು.**

(ಜನವರಿ 12, 2017ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ.)

**ಮಾತಾಜಿ:** ಇಂದು ದಿನಾಂಕ 10ರ ನಿಮ್ಮ ಪತ್ರವನ್ನು ಸ್ವೀಕರಿಸಲು ಮಹದಾನಂದವಾಯಿತು. ನನ್ನ ಅತ್ಯಂತ ಪ್ರೀತಿ ಪಾತ್ರರೇ, ಈ ಧರ್ಮ ಸೇವೆಯಲ್ಲಿ ನಾನೂ ನಿಮ್ಮ ಜೊತೆಗಿರಲು ಆಶಿಸುತ್ತೇನೆ. ಆದರೆ, ಗೊತ್ತಿಲ್ಲ ಅದು ಯಾವಾಗ ನಿಜವಾಗುತ್ತದೆಯೋ. ನೀವು ಭಾರತಕ್ಕೆ ಹೋಗಿ ಒಂದು ವರ್ಷ ಎರಡು ತಿಂಗಳಾಯಿತು. ನಿಮ್ಮ ಧರ್ಮ ಸೇವೆಯಲ್ಲಿ, ಒಬ್ಬಂಟಿಯಾಗಿ ನೀವು ಎದುರಿಸುವ ಕಷ್ಟಗಳಲ್ಲಿ ನಿಮಗೆ ನೆರವು ನೀಡುವ ಬಯಕೆಯಿದೆ. ನಾನೂ ಧರ್ಮ ಸೇವೆ ಮಾಡುವ ಅದೃಷ್ಟವಿದೆಯೇ?.... ಪ್ರತಿಯೊಂದೂ ನಮ್ಮ ಕರ್ಮದ ಫಲವಾಗಿ ನಡೆಯುತ್ತದೆ, ನನಗೆ ಗೊತ್ತಿದೆ. ನನ್ನದು ಫಲ ನೀಡಬೇಕು. ನಾನು ಮತ್ತು ಮಕ್ಕಳು ನಿಮ್ಮಿಂದ ದೂರವಿದ್ದೇವೆ ಎಂಬುದು ನನ್ನ ನೋವಿನ ವಾಸ್ತವ.

.... ನಾನು ದೂರವಾಣಿಯಲ್ಲಿ ನಿಮ್ಮ ಜೊತೆ ಮಾತಾಡಿದೆ. ನೀವು ನನ್ನ ಸಾಧನೆಯ ಬಗ್ಗೆ ಕೇಳಿದ ಕೂಡಲೇ ಸಂವೇದನೆಗಳ ಬಲವಾದ ಅಲೆ ಪ್ರಾರಂಭವಾಯಿತು ಮತ್ತು ನನ್ನ ಜ್ವರ ಮಾಯವಾಯಿತು. ನಾನು ದಿನಕ್ಕೆ ಎರಡು ಬಾರಿ ಧ್ಯಾನ ಮಾಡುತ್ತೇನೆ. ನಗದು ಮತ್ತು ವಸ್ತುಗಳ ರೂಪದಲ್ಲಿ ದಾನ ಕೊಡುತ್ತೇನೆ. ಆದರೆ ಅನ್ನದಾನಕ್ಕೆ ಭಿಕ್ಖುಗಳನ್ನು ಆಮಂತ್ರಿಸುವುದು ನೀವು ಹಿಂತಿರುಗಿದ ಮೇಲೆ ಮಾತ್ರ ಸಾಧ್ಯವಾಗುತ್ತದೆ.

**ಗೋಯಂಕಾಜಿ:** ದೇವಿ ಇಲಾಯಚಿ, ಡಿಸೆಂಬರ್28, ಮತ್ತು ಜನವರಿ 5 ರ ನಿನ್ನ ಎರಡೂ ಪತ್ರಗಳು ತಲುಪಿವೆ. ನಾವು ದೂರವಾಣಿಯಲ್ಲಿ ಮಾತನಾಡಬೇಕಾದರೆ, ನಿನ್ನ ದೇಹದಲ್ಲೆಲ್ಲಾ ಸಂವೇದನೆಯ ತರಂಗ ಎದ್ದು, ನೀನು ಅನುಭವಿಸುತ್ತಿದ್ದ ಲಘು ಜ್ವರ ಮಾಯವಾದದ್ದನ್ನು ಕೇಳಿ ಸಂತೋಷವಾಯಿತು. ನೀನು ನಿನ್ನ ಸಾಧನೆಯನ್ನು ಮನಃಪೂರ್ವಕವಾಗಿ ಮತ್ತು ನಿಯಮಿತವಾಗಿ ಮಾಡುವುದನ್ನು ಮತ್ತು ಪೂಜ್ಯ ಭಾವನೆಯಿಂದ ದಾನ ಕೊಡುತ್ತಿರುವುದನ್ನೂ ಕೇಳಿ ಬಹಳ ಸಂತೋಷವಾಯಿತು. ಭಗವಾನ್ ಬುದ್ಧರು ಹೇಳಿರುವ ಧರ್ಮದ ತಿರುಳು ಇದೇ: ನಾವು ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದಾನ ನೀಡುವುದು, ಶೀಲ ಪಾಲನೆ ಮಾಡುವುದು, ಅತ್ಯಂತ

RNI. No. : KARKAN/2015/68727. Postal Regn. No.: RNP/KA/BGS/2253/2017-19
Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30. Pages-4.

ಶಿಸ್ತಿನಿಂದ, ನಿಯಮಿತವಾಗಿ ನಾವು ಧ್ಯಾನ ಸಾಧನೆ ಮಾಡುವುದು. ಈ ಮೂರು ಗುಣಗಳನ್ನು ಪೂರ್ಣಗೊಳಿಸಲು ನೀನು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು, ನಿಜವಾಗಿಯೂ ಹೇರಳವಾದ ಪಾರಮಿಗಳನ್ನು ಗಳಿಸಿಕೊಳ್ಳುವುದಾಗಿದೆ. ಇಷ್ಟೊಂದು ಶ್ರದ್ಧೆಯಿಂದ ನೀನು ಅನುಸರಿಸುವ ಧರ್ಮವು ಯಾವಾಗಲೂ ನಿನ್ನನ್ನು ರಕ್ಷಿಸುತ್ತದೆ ಮತ್ತು ನಿನ್ನನ್ನು ಅತ್ಯುನ್ನತ ಗುರಿಗೆ ತೆಗೆದುಕೊಂಡು ಹೋಗುತ್ತದೆ. ಇಲ್ಲಿರುವ ನಮ್ಮ ಮಕ್ಕಳ ಬಗ್ಗೆ ಚಿಂತಿಸಬೇಡ. ಅವರವರ ವ್ಯಾಪಾರಗಳಲ್ಲಿ ಎಲ್ಲರೂ ಚೆನ್ನಾಗಿ ಸ್ಥಿರಗೊಂಡಿದ್ದಾರೆ.

ಅಲ್ಲಿ ಮಕ್ಕಳು ಧರ್ಮದ ಜೀವನ ನಡೆಸಲು ನೀನು ಸ್ಫೂರ್ತಿ ನೀಡುತ್ತಿದ್ದೀಯಾ, ಆ ಮುಖೇನ ಅವರನ್ನು ಉಜ್ವಲ ಭವಿಷ್ಯದ ಕಡೆಗೆ ಪ್ರೋತ್ಸಾಹಿಸುತ್ತಿದ್ದೀಯ ಎಂದು ನಾನು ನಂಬುತ್ತೇನೆ.

**ಮಾತಾಜಿ :** ಇನ್ನು 6 ತಿಂಗಳಲ್ಲಿ ನೀವು ಮರಳಿ ಬರುವ ವಿಷಯ ತಿಳಿದು ಆನಂದವಾಯಿತು. ನೀವು ಧ್ಯಾನ ಶಿಬಿರ ಸಂಘಟನೆಯ ಕೆಲಸದಲ್ಲಿ ಮುಳುಗಿರುವ ವಿಷಯ ತಿಳಿದು ನನ್ನ ಹೃದಯ ಸಂತೋಷದಿಂದ ತುಂಬುತ್ತದೆ. ನಾನೂ ಸಹ ಈ ಧಮ್ಮ ಕೆಲಸದಲ್ಲಿ ಭಾಗವಹಿಸಬಯಸುತ್ತೇನೆ. ಆದರೆ ಅದು ಈಗ ಸಾಧ್ಯವಿಲ್ಲ ಎಂದರೆ ಏನು ಮಾಡಲು ಸಾಧ್ಯ.......

**ಗೋಯಂಕಾಜಿ :** ಬಾರಾಚಕಿಯ ಕ್ಯಾಂಪ್‌ನಲ್ಲಿ 46 ಜನ ಭಾಗವಹಿಸಿದ್ದರು. ಅವರಲ್ಲಿ 25 ಜನ ಮಾರವಾಡಿ ಹೆಣ್ಣುಮಕ್ಕಳಿದ್ದರು. ಎಲ್ಲರಿಗೂ ಶಿಬಿರ ಚೆನ್ನಾಗಿ ಆಯಿತು. ನಾನು ಭಿಕ್ಖುವಲ್ಲ ಅಥವಾ ಸಂಸಾರತ್ಯಾಗಿಯಲ್ಲ ಎಂಬುದನ್ನು ತಿಳಿದು ಜನ ಸಂತೋಷಪಡುತ್ತಾರೆ. ನಾನೂ ಗೃಹಸ್ಥ ಎಂಬುದನ್ನು ತಿಳಿದು ಕುತೂಹಲದಿಂದ ನಿನ್ನ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ನಿನ್ನನ್ನು ಭೇಟಿಯಾಗಿದ್ದರೆ ಅವರು ತುಂಬಾ ಸಂತೋಷಪಡುತ್ತಿದ್ದರು. ಧಮ್ಮ ಹರಡುವ ಈ ಬೃಹತ್ಪ್ರಮಾಣದ ಕೆಲಸದಲ್ಲಿ ನೀನು ಯಾವಾಗಲೂ ನನ್ನ ಜೊತೆಗಿದ್ದು ನನಗೆ ಸಹಾಯ ಮಾಡುವ ಮತ್ತು ಧಮ್ಮ ಹೆಣ್ಣುಮಕ್ಕಳನ್ನು ನೋಡಿಕೊಳ್ಳುವ ಕಾಲ ಬರುತ್ತದೆ. ಅದು ಸಮಯ ತೆಗೆದುಕೊಳ್ಳುತ್ತಿದೆ, ನನಗೆ ಗೊತ್ತು. ಆದರೆ ಅದು ಬದಲಾಗುತ್ತದೆ ಮತ್ತು ಖಂಡಿತ ಆ ಸಮಯ ಬರುತ್ತದೆ. ಅಲ್ಲಿಯ ತನಕ ಹೆಚ್ಚಿನ ಸಮಯವನ್ನು ಧ್ಯಾನಕ್ಕೆ ಉಪಯೋಗಿಸಿಕೊಂಡು ಧರ್ಮದಲ್ಲಿ ಗಟ್ಟಿಯಾಗಿ ನೆಲೆಯೂರು. ನಿಯಮಿತವಾಗಿ ಧ್ಯಾನ ಮಾಡುತ್ತಾ, ಸಾಧನೆಯಲ್ಲಿ ನೀನು ಎಷ್ಟು ಎತ್ತರಕ್ಕೆ ಹೋಗಬೇಕೆಂದರೆ, ಬೇಕೆಂದಾಗ ***ಭವಂಗ***(ಕೇಂದ್ರ)ದಲ್ಲಿ ಗಟ್ಟಿಯಾಗಿ ನೀನು ನಿಲ್ಲಬೇಕು. ಯಾವ ಆಸೆಗಳೂ ನಿನಗೆ ತೊಂದರೆ ಕೊಡಬಾರದು. ಒಂದು ಸಾರಿ ನೀನು ಆ ಸ್ಥಿತಿ ತಲುಪಿದರೆ, ಆಗ ನೀನು ಇಲ್ಲಿಗೆ ಬರಲು ಮತ್ತು ನನ್ನ ಜೊತೆಗೂಡಿ ಇತರರಿಗೆ ಧ್ಯಾನ ಹೇಳಿಕೊಡಲು ಶಕ್ತಳಾಗುತ್ತೀಯ. ಕುಟುಂಬದವರೊಂದಿಗೆ ಬಾಬು ಅಣ್ಣ ಧ್ಯಾನ ಕೇಂದ್ರಕ್ಕೆ ಹೋಗುತ್ತಿರುವುದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಯಾವಾಗ ಸಾಧ್ಯವಾಗುತ್ತದೆಯೋ ಆಗ ನೀನೂ ಸಹ ಕುಟುಂಬದವರೊಡನೆ ಹೋಗಿ 10 ದಿನ ಧ್ಯಾನ ಮಾಡು. ಧರ್ಮದಲ್ಲಿ ಮತ್ತು ಧ್ಯಾನದಲ್ಲಿ ನಿನ್ನ ಶ್ರದ್ಧೆ ಮತ್ತು ನಂಬಿಕೆಯನ್ನು ಕಂಡಾಗ ಶಾಂತಿಯ ಭಾವ ನನ್ನನ್ನು ತುಂಬುತ್ತದೆ.

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2018** ಫೆಬ್ರವರಿ 28–11 ಮಾರ್ಚ್, 14–25, 4–15 ಏಪ್ರಿಲ್, 2–13 30ಮೇ–10ಜೂನ್, 13–24 ಜೂನ್, 27–8 ಜುಲೈ,11–22 ಜುಲೈ, 25–5 ಆಗಸ್ಟ್, 8–19, ಸೆಪ್ಟಂಬರ 1–12, 19–30.ಅಕ್ಟೋಬರ್ 10–21, 24–4 ನವೆಂಬರ್ 21–2 ಡಿಸೆಂಬರ್ 5–16, 19–30. **2019: ಜನವರಿ 2–13, 16–27, 30–10 ಫೆಬ್ರವರಿ 13–24, 27–10 ಮಾರ್ಚ್ 13–24, ಸತಿಪಟ್ಠಾನ ಶಿಬಿರಗಳು: 2018ನವೆಂಬರ್ 9–17, 2019 ಮಾರ್ಚ್ 28–5 ಏಪ್ರಿಲ್. ಧಮ್ಮ ಸೇವಕರ ಕಾರ್ಯಾಗಾರ: 2018 ನವೆಂಬರ್–4, ಡಿಸೆಂಬರ್–2, ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ. ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377, ಇ–ಮೇಲ್: info@paphulla.dhamma.org; website: www.dhamma.org. **7406934095**

## ವಾರದ ಒಂದು ಗಂಟೆಯ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಬೆಂಗಳೂರು: ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593. **ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ:**
**http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473. **ಶಿವಮೊಗ್ಗ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6. ಸಂಪರ್ಕಿಸಿ: 8453845690, 9480086856, 9449623606.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ

ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.